5. ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

(ಅ) ವಿಷಯ : ದ್ವಿತೀಯ ಪಿ.ಯು.ಸಿ. ಪ್ರಶ್ನೆ ಪತ್ರಿಕೆಗಳು ಪರೀಕ್ಷಾಪೂರ್ವದಲ್ಲಿಯೇ ಬಯಲಾಗಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೊಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ದ್ವಿತೀಯ ಪಿ.ಯು.ಸಿ. ಪ್ರಶ್ನೆ ಪತ್ರಿಕೆಗಳು ಪರೀಕ್ಷೆಗೆ ಮುಂಚೆ ಬಯಲಾಗಿರುವ ಬಗ್ಗೆ ಚರ್ಚಿಸಲು ಅನುಮತಿ ಕೋರಿ ತಮಗೆ ನೋಟಿಸ್ ಕಳುಹಿಸಿದ್ದೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ. ಆಮೇಲೆ ಇದರ ಬಗ್ಗೆ ಚರ್ಚೆ ಮಾಡಬಹುದು.

ಶ್ರೀ ಸಿದ್ದರಾಮಯ್ಯ : ಏನು, ನೀವು ನಮಗೆ ಪ್ರಸ್ತಾಪ ಮಾಡುವುದಕ್ಕೇ ಬಿಡುತ್ತಿಲ್ಲವಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಇದು ಶೂನ್ಯವೇಳೆಯಲ್ಲವೆ? ಸಂಬಂಧಪಟ್ಟ ಸಚಿವರು ಸ್ಟೇಟ್‌ಮೆಂಟ್ ಮಾಡಬೇಕಲ್ಲ?

ಶ್ರೀ ಸಿದ್ದರಾಮಯ್ಯ : ಪ್ರಶ್ನೆ ಪತ್ರಿಕೆಗಳು ಬಯಲಾಗಿರುವುದರಿಂದ ಇಡೀ ರಾಜ್ಯದಲ್ಲಿರುವ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳ ಮೇಲೆ ಕೆಟ್ಟ ದುಷ್ಪರಿಣಾಮ ಬೀರಿದೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಶೂನ್ಯ ವೇಳೆಯಲ್ಲಿ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ. ಈಗ ನೋಡಿದರೆ Technical objection ಗಳನ್ನು ತೆಗೆಯುತ್ತಿದೀರಲ್ಲ?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಖಂಡಿತವಾಗಿಯೂ ಮಾನ್ಯ ವಿರೊಧ ಪಕ್ಷದ ನಾಯಕರ ಹೇಳಿಕೆಯನ್ನು ನಾವು ಸ್ವಾಗತ ಮಾಡುತ್ತೇವೆ. ಇಲ್ಲವೆಂದು ಹೇಳುವುದಿಲ್ಲ. ಎರಡು ಗಂಭೀರವಾದ ವಿಚಾರಗಳು ನಮ್ಮ ಮುಂದಿದೆ. ಮೊದಲನೆಯದಾಗಿ, ಕಾವೇರಿ ನೀರಿನ ವಿವಾದ, ಎರಡನೆಯದಾಗಿ ಪ್ರಶ್ನೆ ಪತ್ರಿಕೆಗಳು ಬಯಲಾಗಿರುವಂಥದ್ದು. ಮಾನ್ಯ ವಿರೋಧ ಪಕ್ಷದ ನಾಯಕರ ಕಾಳಜಿಯನ್ನು ನಾನು ಖಂಡಿತ ವಾಗಿಯೂ ಗೌರವಿಸುತ್ತೇನೆ ಮತ್ತು ಸ್ವಾಗತಿಸುತ್ತೇನೆ. ನಾವು ಈ ಎರಡೂ ವಿಚಾರಗಳ ಬಗ್ಗೆ ಖಂಡಿತವಾಗಿಯೂ ಒಂದಷ್ಟು ಸುದೀರ್ಘವಾಗಿ ಚರ್ಚೆಗಳು ನಡೆಯಬೇಕು ಎಂದು ಹೇಳುತ್ತೇವೆ. ವಿಶೇಷವಾಗಿ ಈ ಪಿ.ಯು.ಸಿ. ಪ್ರಶ್ನೆ

ಪತ್ರಿಕೆಗಳು ಬಯಲಾಗಿರುವ ಬಗ್ಗೆಯೂ ಚರ್ಚೆಯಾಗ ಬೇಕಿದೆ. ಇದು ನಿರಂತರವಾಗಿ ಕಳೆದ ಬೇರೆ ಬೇರೆ ಸಂದರ್ಭಗಳಲ್ಲಿ ನಡೆಯುತ್ತಲೇ ಬಂದಿದೆ. ಎಲ್ಲೋ ಒಂದು ಹಂತದಲ್ಲಿ ನಾವು ಇದಕ್ಕೆ ಯಾವುದಾದರೂ ರೀತಿಯಲ್ಲಿ ಇದನ್ನು ಕೊನೆಗಾಣಿಸದಿದ್ದರೆ ಪ್ರಾಯಶಃ ವರ್ಷ ಪ್ರತಿ ಪ್ರಶ್ನೆ ಪತ್ರಿಕೆಗಳು ಬಯಲಾಗುವಂಥದ್ದು, ಒಮ್ಮೆ ಚರ್ಚೆ ಮಾಡುವುದು, ಅದು ಹಾಗೆಯೇ ಹೋಗುವಂಥ ಪರಿಸ್ಥಿತಿಗಳು ಹಿಂದೆ ಆಗಿವೆ.

ಅದಕ್ಕಾಗಿ ಇದರ ಬಗ್ಗೆ ನಾನು ಈಗಾಗಲೇ ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಇಲ್ಲಿಯವರೆಗೆ ನಡೆದಂತಹ ವಿಚಾರದ ಬಗ್ಗೆ ಸದನದ ಮುಂದೆ ಅವರು ಒಂದು statement ಮಾಡಬೇಕು. ನಾವು ಮತ್ತು ವಿ.ಪಕ್ಷದವರು ಸೇರಿಕೊಂಡು ಇದರ ಬಗ್ಗೆ ಸುದೀರ್ಘವಾದ ಚರ್ಚೆಗಳನ್ನು ಮಾಡಬೇಕು. ಇವತ್ತು latest technology ಬಂದಿರುವಂತಹ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಈ ರೀತಿ ಆಗದ ಹಾಗೆ ಏನಾದರೂ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳುವಂತಹ ವಿಚಾರ ನಮ್ಮ ಸರ್ಕಾರದ ಮನಸ್ಸಿನಲ್ಲಿ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರ ಬೇಡಿಕೆಯನ್ನು ನಾನು ಸ್ವಾಗತ ಮಾಡುತ್ತೇನೆ. ನಾವು ಒಂದು ಹೇಳಿಕೆಯನ್ನು ಮಂಡನೆ ಮಾಡುತ್ತೇವೆ. ಆಮೇಲೆ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ. ಸಲಹೆ ಎಲ್ಲಾ ಸ್ವೀಕಾರ ಮಾಡುತ್ತೇವೆ. ಇಷ್ಟರವರೆಗೆ ನಡೆದಂತಹ ವಿದ್ಯಮಾನದ ಬಗ್ಗೆ ಏನು ಮಾಡಬೇಕೆಂದು ಹೇಳುವಂತಹ ವಿಚಾರದಲ್ಲಿ ಕೂಡ ನಿಮ್ಮ ಸಲಹೆಗಳ ಆಧಾರದ ಮೇಲೆ ನಾವು ಮುಂದೆ ಹೋಗುವುದಕ್ಕೆ ತಯಾರಿದ್ದೇವೆ.

(ಆ) ವಿಷಯ : ಅರಣ್ಯಕ್ಕೆ ಬೆಂಕಿ ಬಿದ್ದಿರುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಎರಡು ಪ್ರಮುಖವಾದ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿ ಸರ್ಕಾರದ ಹೇಳಿಕೆಗಳನ್ನು ಪಡೆಯುವ ಜೊತೆಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಎರಡನೆಯದಾಗಿ, ನಿಮ್ಮ ಊರಿಗೆ ದಿನಾ ಬೆಂಕಿ ಬೀಳುತ್ತಿದೆ, ರಾಜ್ಯದ ಅರಣ್ಯಕ್ಕೆ ಬೆಂಕಿ ಬೀಳುತ್ತಿದೆಯಲ್ಲ, ಆ ಬೆಂಕಿ ತನ್ನಷ್ಟಕ್ಕೆ ತಾನೇ ಬೀಳುತ್ತಿದೆಯಾ ಅಥವಾ ಯಾರಾದರೂ ಬೆಂಕಿ ಇಡುತ್ತಿದ್ದಾರಾ ಗೊತ್ತಾಗುತ್ತಿಲ್ಲ. ದಯಮಾಡಿ ಅದರ ಬಗ್ಗೆ ಕೂಡ ಒಂದು ಹೇಳಿಕೆಯನ್ನು ಕೊಡಿಸಿ. ಇದರಲ್ಲಿ ಅದೂ ಕೂಡ ಬಹಳ ಪ್ರಮುಖವಾಗಿರುವಂತಹ ವಿಚಾರ.